**ಸಿವಿಲ್ ನ್ಯಾಯಾಧೀಶರು ಅಂಕೋಲಾ ರವರ ನ್ಯಾಯಾಲಯದಲ್ಲಿ**

**ದಿನಾಂಕ 28ನೇ ಏಪ್ರಿಲ್ 2018**

**ಉಪಸ್ಥಿತರು**
**ಶ್ರೀ ಶಂಭುಲಿಂಗಯ್ಯ ಮೂಡಿಮಠ್,**
**ಬಿ.ಕಾಂ.,ಎಲ್ಎಲ್.ಬಿ.(ಸ್ಪೆ),**

**ಸಿವಿಲ್ ನ್ಯಾಯಾಧೀಶರು, ಅಂಕೋಲಾ.**

***ಮೂಲ ದಾವಾ ನಂ.40 /2018***

**ವಾದಿಯರು** : **1**. ಕರಿಯಾ ಬುದ್ದು ಗೌಡ,
**ಅರ್ಜಿದಾರರು** ವಯಸ್ಸು ಅ 48 ವರ್ಷ,
ಉದ್ಯೋಗಃ ರೈತಾಬಿ,
ವಾಸ್ತವ್ಯಃ ಅಂಬರಕೋಡ್ಲ, ತಾಃ ಅಂಕೋಲಾ.

2. ಶಂಕರ ಬುದ್ದು ಗೌಡ,
ವಯಸ್ಸು ಅ 43 ವರ್ಷ,
ಉದ್ಯೋಗಃ ರೈತಾಬಿ,
ವಾಸ್ತವ್ಯಃ ಶಿರಕುಳಿ,
ತಾಃ ಅಂಕೋಲಾ.

(ಶ್ರೀ ಶ್ರೀನಿವಾಸ ಯು.ಎ., ವಕೀಲರು)

**–ವಿರುದ್ಧ–**

**ಪ್ರತಿವಾದಿಯರುಃ** 1. ಮಂಗೇಶ ವಿಠೋಬ ಶೆಟ್ಟಿ,
**ಎದುರುದಾರರು** ವಯಸ್ಸು ಅ 65 ವರ್ಷ,
ಉದ್ಯೋಗಃ ವ್ಯಾಪಾರ,
ವಾಸ್ತವ್ಯಃ ಶಿರಕುಳಿ, ತಾಃ ಅಂಕೋಲಾ.

2. ಗಜಾನನ ಜಾನೂ ನಾಯ್ಕ,
ರೈತ ವ ಹೋಟೆಲ್ ಉದ್ಯೋಗ,
ವಯಸ್ಸು ಅ 60 ವರ್ಷ,
ಸಾಃ ಶಿರಕುಳಿ, ಅಂಕೋಲಾ.

3. ಶಂಕರ ಮಹದೇವ ಶೆಟ್ಟಿ,
ಉದ್ಯೋಗಃ ವ್ಯವಹಾರ,
ವಯಸ್ಸು ಅ 50 ವರ್ಷ,
ಸಾಃ ಶಿರಕುಳಿ, ಅಂಕೋಲಾ.
(1 – ಶ್ರೀ ಎಂ.ಎ.ರಾಯ್ಕರ್, ವಕೀಲರು
2, 3 – ಶ್ರೀ ವಿ.ವಿ.ಶಾನಭಾಗ, ವಕೀಲರು)

**ಮಧ್ಯಂತರ ಅರ್ಜಿ ನಂ.1 ರ ಮೇಲೆ ಆದೇಶ**

ಪ್ರಸ್ತುತ ಮಧ್ಯಂತರ ಅರ್ಜಿಯನ್ನು ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 39 ನಿಯಮ 1 ಮತ್ತು 2 ಹಾಗೂ ಸಹ ಕಲಂ 151 ರ ಅಡಿಯಲ್ಲಿ 1 ನೇ ಪ್ರತಿವಾದಿಯ ವಿರುದ್ದ ದಾಖಲಿಸಿದ್ದು, ದಾವೆಯು ಅಂತಿಮವಾಗಿ ಗುಣಾವಗುಣಗಳ ಮೇಲೆ ನಿಖಾಲೆಯಾಗುವರೆಗೆ ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯು ಯಾವುದೇ ಕಟ್ಟಡವನ್ನು ಕಟ್ಟದಂತೆ ತಾತ್ಪೂರ್ತಿಕ ನಿಷೇಧಾಜ್ಞೆ ಆದೇಶ ಮಾಡಬೇಕೆಂದು ಕೋರಿ ಕೊಂಡಿರುತ್ತಾರೆ.

2. ಪ್ರಸ್ತುತ ಮದ್ಯಂತರ ಅರ್ಜಿಯೊಂದಿಗೆ 2 ನೇ ವಾದಿಯು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಪ್ರಮಾಣ ಪತ್ರದಲ್ಲಿ 2 ನೇ ವಾದಿಯು ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿ ಅಕ್ರಮವಾಗಿ ಮನೆಯನ್ನು

ಕಟ್ಟುತ್ತಿರುವ ಕುರಿತು ದಾವೆಯನ್ನು ದಾಖಲಿಸಲಾಗಿರುತ್ತದೆ. 1 ನೇ ಪ್ರತಿವಾದಿ ಕಾನೂನಿಗೆ ಬೆಲೆ ಕೊಡದ ವ್ಯಕ್ತಿ ಆಗಿರುತ್ತಾನೆ. ದಾವಾ ಆಸ್ತಿಯ ಹಕ್ಕಿನ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ನಂ.84595ಃ2013 (ಎಲ್ಆರ್) ಪ್ರಕರಣ ದಾಖಲಿಸಿರುವ ವಿಷಯ ತಿಳಿಯಗೊಡದೆ ಮತ್ತು ದಾವಾ ಆಸ್ತಿಗೆ ಸಂಬಂಧಿಸಿದಂತೆ ಮೇಲ್ಮನವಿಯನ್ನು ದಾಖಲ್ಪಡಿಸಿ ಮಾನ್ಯ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು, ಕಾರವಾರ ಇವರು ದಾವಾ ಆಸ್ತಿಯ ಹಿಸ್ಸಾ ಬಾರ್ ನಕಾಶೆಯನ್ನು ರದ್ದುಪಡಿಸಿದ ವಿಷಯವನ್ನು ಯಾರಿಗೂ ತಿಳಿಯಗೊಡದೆ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಿಂದ ಪರವಾನಗಿ ಪಡೆಯದೇ, ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ತೀರ್ಮಾನವಾದ ನಂತರ ಮನೆ ಕಟ್ಟುವ ಬದಲು ಹೇಗಾದರೂ ಮಾಡಿ ವಾದಿಯರಿಗೆ ಹಕ್ಕು ಕಡಿಮೆ ಮಾಡಿ ದಾವಾ ಆಸ್ತಿಯಲ್ಲಿ ಅಕ್ರಮವಾಗಿ ಇಮಾರತು ಕಟ್ಟುತ್ತಿದ್ದು. ದಾವಾ ಆಸ್ತಿಯಲ್ಲಿ ಹಕ್ಕು ನಿರ್ಧಾರ ಆಗುವತನಕ ಯಾವುದೇ ಮನೆಯನ್ನು ಕಟ್ಟಲು 1 ನೇ ಪ್ರತಿವಾದಿಗೆ ಹಕ್ಕು ಇರುವುದಿಲ್ಲ. ಕಾರಣ, ಅರ್ಜಿಯಲ್ಲಿ ಕೋರಿದಂತೆ ಆದೇಶ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

3. 1 ನೇ ಪ್ರತಿವಾದಿ ಸದರ ಅರ್ಜಿಗೆ ವಿವರವಾದ ತಕರಾರನ್ನು ಸಲ್ಲಿಸಿದ್ದು, 1 ನೇ ಪ್ರತಿವಾದಿ ತಕರಾರಿನಲ್ಲಿ ಹೇಳುವುದೆನೆಂದರೆ, ದಾವಾ ಆಸ್ತಿ ಬ್ಲಾಕ್ ನಂ.115 ಕ್ಷೇತ್ರ 00–09–00 ನೇದ್ದನ್ನು 1960 ರಿಂದ ಅದರ ಮಾಲೀಕರಾದ ಮಾಬ್ಲು ಕರಿಯಾ ಗೌಡ ಇವರಿಂದ ಸಾಗುವಳಿಗೆ ಪಡೆದು 1974 ರಲ್ಲಿ ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿ ಗೇಣಿದಾರ, ಸಾಗುವಳಿದಾರ ಹಾಗೂ ಮಾಲಕರ ಮುಂದೆ

ವಿಚಾರಣೆಯಾಗಿ 24.7.1981 ರಲ್ಲಿ ಮಂಜೂರಾಗಿದ್ದು ಇರುತ್ತದೆ. ಫೆಬ್ರವರಿ 1983 ರಲ್ಲಿ ಪಟ್ಟಾ ಸಹ ನೀಡಿದ್ದು ಇರುತ್ತದೆ. 1960 ರಿಂದ 1 ನೇ ಪ್ರತಿವಾದಿಯು ದಾವಾ ಸ್ಥಳದಲ್ಲಿ ಅಲಗೇರಿ ಗ್ರಾಮ ಪಂಚಾಯತ್ ಮನೆ ನಂ.238 ನೇದ್ದರಲ್ಲಿ ವಾಸ್ತವ್ಯ ಹಾಗೂ ಅಂಕೋಲಾ–ಕಾರವಾರ ರಸ್ತೆ ಅಂಚಿನಲ್ಲಿ ಸಣ್ಣ ಕಿರಾಣಿ ಅಂಗಡಿಯನ್ನು ಕಟ್ಟಿಕೊಂಡು ತನ್ನ ಹೆಂಡತಿ ಮಕ್ಕಳ ಜೊತೆ ನಿರಾತಂಕವಾಗಿ ಶಾಂತ ರೀತಿಯಿಂದ ಸುರಳೀತ ಕಬ್ಜಾ ವಹಿವಾಟು ಮಾಡಿಕೊಂಡು ಬಂದಿರುತ್ತಾನೆ. ಈ ಬಗ್ಗೆ ವಾದಿಯರಾಗಲೀ ಮತ್ತು ಇತರರಾಗಲೀ 1 ನೇ ಪ್ರತಿವಾದಿಯ ಕಬ್ಜಾ ವಹಿವಾಟಿಯನ್ನು ಪ್ರಶ್ನಿಸಿದ್ದು ಇರುವುದಿಲ್ಲ. 1 ನೇ ಪ್ರತಿವಾದಿ ಮುಂದುವರೆದು ಹೇಳುವುದೇನೆಂದರೆ, ದಾವಾ ಆಸ್ತಿಯು ಮೂಲತಃ 00–49–00 ಆಸ್ತಿ ಇದ್ದು ನಂತರ 00–19–12 ಅಣೆ ರಾಷ್ಟ್ರೀಯ ಹೆದ್ದಾರಿಗೆ ಭೂಸ್ವಾಧೀನವಾದ ನಂತರ 00–29–00 ಮಾತ್ರ ಸ್ವಾಧೀನತೆಯಲ್ಲಿ ಇರುತ್ತದೆ. ಸದರ್ ಆಸ್ತಿಯ ಉತ್ತರ ದಿಕ್ಕಿನಲ್ಲಿ 00–08–08 2 ನೇ ಪ್ರತಿವಾದಿಯ ಹೋಟೆಲ್ ವರದರಾಜು ಇರುತ್ತದೆ. ನಂತರ 1 ನೇ ಪ್ರತಿವಾದಿಯು 00–09–00 ಗುಂಟೆ ಆಸ್ತಿ ಬಂದಿರುತ್ತದೆ. 1ನೇ ಪ್ರತಿವಾದಿಯ ದಕ್ಷಿಣ ಮತ್ತು ಪಶ್ಚಿಮದ ಗಡಿಯಲ್ಲಿ ಚಂದ್ರಕಾಂತ ಯಶ್ವಂತ ರಾಯ್ಕರ್‌ಗೆ ಸೇರಿದ 00–04–00 ಕ್ಷೇತ್ರ, ದಕ್ಷಿಣಕ್ಕೆ ಜ್ಞಾನೇಶ್ವರ ಕೃಷ್ಣಾ ಗೌಡ ಇವರಿಗೆ ಸೇರಿದ 00–04–08 ಕ್ಷೇತ್ರ, ದಕ್ಷಿಣಕ್ಕೆ ಶಂಕರ ಮಹಾದೇವ ಶೆಟ್ಟಿ ಇವರ ಜಮೀನು ಬರುತ್ತದೆ. ಈ ಕುರಿತು ನಕಾಶೆಯನ್ನು ಹಾಜರುಪಡಿಸಿದ್ದು ನಕಾಶೆಯನ್ನು ಉದಾಹರಣೆಯ ಒಂದು ಭಾಗವೆಂದು ಪರಿಗಣಿಸಲು ಅರಿಕೆ ಇರುತ್ತದೆ.

4. ಪ್ರತಿವಾದಿ ಮುಂದುವರೆದು ಹೇಳುವುದೇನೆಂದರೆ, ವಾದಿಯರು 2 ನೇ ಪ್ರತಿವಾದಿಯ ಚಿತಾವಣೆಯ ಮೇರೆಗೆ ಸುಳ್ಳು ದಾವೆಯನ್ನು

ಮಾಡಿದ್ದು 1 ನೇ ಪ್ರತಿವಾದಿ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರ ನ್ಯಾಯಾಲಯ, ಕಾರವಾರ ಇವರಲ್ಲಿ ಮೇಲ್ಮನವಿ ನಂ.18ಃ2012–13 ದಾಖಲಿಸಿದ್ದು ಅದು ದಿನಾಂಕ 20.12.2012 ಕ್ಕೆ ನಿಖಾಲೆಯಾಗಿದ್ದು ಸದರ್ ಪ್ರಕರಣದಲ್ಲಿ 6 ನೇ ಪ್ಯಾರಾದಲ್ಲಿ ವಿವರಿಸಿದಂತೆ 1 ನೇ ಪ್ರತಿವಾದಿ ಕಬ್ಜೇದಾರರು ಇರುತ್ತಾರೆ ವಿನಃ ಉಳಿದವರಿಗೆ ಯಾವುದೇ ಕ್ಷೇತ್ರ ಇರುವುದಿಲ್ಲ ಅಂತಾ ನಿರ್ಣಯ ಮಾಡಿದ್ದು ಇರುತ್ತದೆ. ಸದರ ಆದೇಶದ ಪ್ರಕಾರ ಹೊಸ ನಕಾಶೆ ಮತ್ತು ಪಹಣಿ ಪತ್ರಿಕೆ ಆಗುವುದು ಬಾಕಿ ಇರುತ್ತದೆ. ಈ ಎಲ್ಲಾ ಸತ್ಯಾಂಶಗಳನ್ನು ಬದಿಗಿಟ್ಟು 1 ನೇ ಪ್ರತಿವಾದಿಗೆ ತೊಂದರೆ ಕೊಡಲು ದಾವೆ ಮಾಡಿರುತ್ತಾರೆ. ಆ ಕಾರಣ, ಅರ್ಜಿ ವಜಾಗೊಳಿಸಲು ವಿನಂತಿ ಇರುತ್ತದೆ. 1ನೇ ಪ್ರತಿವಾದಿ ಮುಂದುವರೆದು ದಾವಾ ಆಸ್ತಿಯಲ್ಲಿ ಇರುವ ಮನೆಯು ಜೀರ್ಣಾವಸ್ಥೆಯಲ್ಲಿ ಇರುವುದರಿಂದ ಸರ್ಕಾರದ ಯೋಜನೆಯಡಿಯಲ್ಲಿ ಪ್ರತಿವಾದಿಯ ಹೆಂಡತಿ ಲಕ್ಷ್ಮೀ ಮಂಗೇಶ ಶೆಟ್ಟಿ ಇವರ ಹೆಸರಿನಲ್ಲಿ ಅನುದಾನ ಮಂಜೂರಾಗಿದ್ದು ಗ್ರಾಮ ಪಂಚಾಯತಿಯಿಂದ ಪರವಾನಗಿ ಪಡೆದು ಆ ಮೂಲಕ ಮನೆಯ ಸ್ಥಳದಲ್ಲಿ ನವೀಕರಣಗೊಳಿಸಿ ಮನೆಯನ್ನು ಕಟ್ಟುತ್ತಿದ್ದು ಹೊಸ ಮನೆಯನ್ನು ಕಟ್ಟುತ್ತಿರುವುದಿಲ್ಲ. 1 ನೇ ಪ್ರತಿವಾದಿ ವಾದಿಯರ ಸ್ಥಳವನ್ನು ಅತಿಕ್ರಮಿಸಿರುವುದಿಲ್ಲ. ಒಂದಾನುವೇಳೆ ಅತಿಕ್ರಮಣ ಮಾಡಿದ್ದು ಕಂಡು ಬಂದಲ್ಲಿ ತನ್ನ ಸ್ವಂತ ಖರ್ಚಿನಿಂದ ಖುಲ್ಲಾಪಡಿಸಲು ಸಿದ್ಧನಿರುತ್ತಾನೆ. 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು ಪಡಿತರ ಚೀಟಿ, ಮತದಾರರ ಚೀಟಿ, ಆಧಾರ್ ಕಾರ್ಡನ್ನು ಹೊಂದಿದ್ದು ಆ ಕಾರಣ ಪ್ರತಿವಾದಿಯ ವಿರುದ್ಧ ಯಾವುದೇ ಆದೇಶವನ್ನು ಮಾಡಲು ಬರಲಾರದು.

5. 1ನೇ ಪ್ರತಿವಾದಿಯು ಮುಂದುವರೆದು ಹೇಳುವುದೇನೆಂದರೆ, ಮಾನ್ಯ ನ್ಯಾಯಾಲಯದಲ್ಲಿ 2 ನೇ ಪ್ರತಿವಾದಿಯ ವಿರುದ್ಧ ಮೂಲ ದಾವಾ ನಂ.6ಃ2010 ರಂತೆ 1 ನೇ ಪ್ರತಿವಾದಿಗೆ ಸೇರಿದ ಜಮೀನಿನ ಉತ್ತರದ ಗಡಿಯಲ್ಲಿರುವ ಪಾಗಾರದ ಗೋಡೆಯನ್ನು ಒಡೆದು ಅತಿಕ್ರಮಣ ಮಾಡದಂತೆ ಮತ್ತು ಹೋಟೆಲಿನಿಂದ ಅಥವಾ ಸಂಡಾಸು, ಬಚ್ಚಲು ಮನೆಯಿಂದ ಯಾವುದೇ ರೀತಿಯ ಹೊಲಸು ನೀರನ್ನು ವಾದಿಯ ದಾವಾ ಸ್ವತ್ತಿನಲ್ಲಿ ಬಿಡದಂತೆ ಹಾಗೂ ಸ್ವಾಧೀನಾನುಭವಕ್ಕೆ ಅಡ್ಡಿ ಆತಂಕಪಡಿಸದಂತೆ ಖಾಯಂ ಪ್ರತಿಬಂಧಕಾಜ್ಞೆ ಆದೇಶವನ್ನು ದಿನಾಂಕ 6.3.2013 ರಂದು ಮಾಡಿರುತ್ತದೆ. ಅಲ್ಲದೆ 2 ನೇ ಪ್ರತಿವಾದಿಯು ಡಿ.ಡಿ.ಎಲ್.ಆರ್ ಕೋರ್ಟಿನಲ್ಲಿ ವಾದಿಯರಿಗೆ ದಾವಾ ಕ್ಷೇತ್ರದಲ್ಲಿ ಯಾವುದೇ ಸ್ಥಳಾವಕಾಶ ಇಲ್ಲದಿರುವುದನ್ನು ಸ್ವತಃ ಒಪ್ಪಿಕೊಂಡಿದ್ದು ಇರುತ್ತದೆ. ಅಲ್ಲದೆ ಅಂಕೋಲಾ ತಾಲೂಕು ಶಿರಕುಳಿ ಗ್ರಾಮದ ಬ್ಲಾಕ್ ನಂ.116 ಕ್ಷೇತ್ರ 00–09–00 ಭೂನ್ಯಾಯ ಮಂಡಳಿಯಿಂದ ಪ್ರತಿವಾದಿಗೆ ಮಂಜೂರಾಗಿದ್ದು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಮತ್ತು 1 ನೇ ಪ್ರತಿವಾದಿಯ ಕಬ್ಜಾ ವಹಿವಾಟಿಯಲ್ಲಿ ಇರುತ್ತದೆ. ಅಲ್ಲದೆ ನ್ಯಾಯಾಲಯದ ಮೂಲ ದಾವಾ ನಂ.91ಃ1995 ವಜಾ ಆಗಿದ್ದು ಇರುತ್ತದೆ. ಭೂನ್ಯಾಯ ಮಂಡಳಿಯಿಂದ ನಿರ್ಣಯವಾದ 30–35 ವರ್ಷಗಳ ನಂತರ ಈಗ ವಾದಿಯರಿಗಾಗಲೀ, ಇತರರಿಗಾಗಲೀ ಪ್ರಶ್ನಿಸಲು ಬರುವುದಿಲ್ಲ. ವಾದಿಯರಿಗೆ ದಾವೆಯನ್ನು ಮಾಡುವಂತಹ ಯಾವುದೇ ಪ್ರಸಂಗವು ಉದ್ಭವಿಸಿರುವುದಿಲ್ಲ. ವಾದಿಯರು ದುಷ್ಟ ಇರಾದೆಯಿಂದ ದಾವೆಯನ್ನು ದಾಖಲಿಸಿರುವುದರಿಂದ ಮತ್ತು 1 ನೇ ಪ್ರತಿವಾದಿಯು ಬ್ಯಾಂಕಿನಿಂದ ಸಾಲ ಪಡೆದು ಕಲ್ಲು, ರೇತಿ, ಸಿಮೆಂಟು, ಕಬ್ಬಿಣವನ್ನು ಮನೆ ಕಟ್ಟಲು ದಾಸ್ತಾನು ಮಾಡಿಕೊಂಡಿರುವುದರಿಂದ 1 ನೇ

ಪ್ರತಿವಾದಿಯ ವಿರುದ್ಧ ಆದೇಶ ಮಾಡಿದಲ್ಲಿ 1 ನೇ ಪ್ರತಿವಾದಿಗೆ ತೊಂದರೆ ಉಂಟಾಗುತ್ತದೆ. ಆ ಕಾರಣ, ಅರ್ಜಿಯನ್ನು ವಜಾಗೊಳಿಸಬೇಕೆಂದು ವಿನಂತಿಸಿಕೊಂಡಿರುತ್ತಾನೆ.

6. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

7. ಕಡತದಲ್ಲಿರುವ ಎಲ್ಲಾ ದಾಖಲೆಗಳನ್ನು ಅವಲೋಕಿಸಲಾಯಿತು.

8. ಈಗ ನನ್ನ ಗಮನಕ್ಕೆ ಬಂದಂತಹ ಅಂಶಗಳು ಈ ಕೆಳಗಿನಂತೆ ಇರುತ್ತವೆಃ

1. ಅರ್ಜಿದಾರಃವಾದಿಯರು ತಮ್ಮ ಪರವಾಗಿ ಮೇಲ್ನೋಟಕ್ಕೆ (ಪ್ರೈಮಾಫೇಸಿ ಕೇಸ್) ಪ್ರಕರಣ ಇದೆ ಎಂಬುದನ್ನು ರುಜುವಾತುಪಡಿಸುವರೇ?

2. ಅರ್ಜಿದಾರಃ ವಾದಿಯರು ತಮ್ಮ ಪರವಾಗಿ ಬ್ಯಾಲೆನ್ಸ್ ಆಫ್ ಕನ್ವೀನಿಯನ್ಸ್ ಇದೆ ಎಂಬುದನ್ನು ರುಜುವಾತುಪಡಿಸುವರೇ?

3. ಅರ್ಜಿದಾರಃ ವಾದಿಯರು ಮಧ್ಯಂತರ ಅರ್ಜಿ ನಂ.1 ರಲ್ಲಿ ಕೋರಿದಂತೆ ಹಂಗಾಮಿ ತಾಕೀತು ಆದೇಶವನ್ನು ನೀಡದಿದ್ದರೆ ತಮಗೆ ಹೇರಳ ಲುಕ್ಸಾನಾಗುತ್ತದೆ ಎಂದು ರುಜುವಾತುಪಡಿಸುವರೇ?

4. ಹಾಗಾದರೆ ಏನು ಆದೇಶ ?

9. ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿರುತ್ತದೆಃ

ಅಂಶ ನಂ.1ಃ ನಕಾರಾತ್ಮಕವಾಗಿ.

ಅಂಶ ನಂ.2ಃ ನಕಾರಾತ್ಮಕವಾಗಿ.

ಅಂಶ ನಂ.3ಃ ನಕಾರಾತ್ಮಕವಾಗಿ.

ಅಂಶ ನಂ.4ಃ ಅಂತಿಮ ಆದೇಶದಂತೆ

ಈ ಕೆಳಗಿನ ನಮೂದಿಸಿದ ಕಾರಣಗಳಿಗಾಗಿಃ

**ಕಾರಣಗಳು**

10. **ಅಂಶ ನಂ.1ಃ–** ಪ್ರಸ್ತುತ ದಾವೆಯನ್ನು ವಾದಿಯರು ಪ್ರತಿವಾದಿಯರ ವಿರುದ್ಧ ಅದರಲ್ಲೂ 1 ನೇ ಪ್ರತಿವಾದಿಯ ವಿರುದ್ಧ ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಗೆ ಹಕ್ಕು ಪ್ರಾಪ್ತವಾಗಿ ಆತನ ಹಕ್ಕು ಮತ್ತು ಹಿಸ್ಸಾ ಗುರುತು ನಿರ್ಧಾರ ಆಗುವತನಕ ಯಾವುದೇ ಇಮಾರತು, ಕಟ್ಟಡ ವಗೈರೆ ನಿರ್ಮಿಸದಂತೆ ಖಾಯಂ ಮನಾಯಿ ಆದೇಶ ಮಾಡಬೇಕೆಂದು ಕೋರಿ ದಾವೆಯನ್ನು ಹೂಡಿದ್ದು ಇರುತ್ತದೆ.

11. ವಾದಿಯರ ಪ್ರಕಾರ ದಾವಾ ಆಸ್ತಿಯಾದ ಶಿರಕುಳಿ ಗ್ರಾಮದ ಬ್ಲಾಕ್ ನಂ.115 ಮೂಲತಃ ಯಂಕಾ ಮಂಕಾಳು ಗೌಡ ಸ್ವತಂತ್ರ ನಾತೆಯಿಂದ ಆತನ ಹೆಸರಿಗೆ ಕಂದಾಯ ದಾಖಲೆಗಳಲ್ಲಿ ಮತ್ತು ಆತನು ಪೌತಿಯಾದ ನಂತರ ಆತನ ಹೆಂಡತಿ ನಾಗಿ ಕೋಂ ಯಂಕು ಗೌಡ ಇವಳ ಹೆಸರಿಗೆ ವಾರ್ಸಾ ಪ್ರಕಾರ ಪ್ರಾಪ್ತವಾಗಿದ್ದು ಅವಳ ಮರಣಾ ನಂತರ ಆಕೆಯ ಮಗ ಮಂಕಾಳು ಯಂಕು ಗೌಡ ಇವರ ಹೆಸರಿಗೆ ಮತ್ತು ಅಪ್ರಾಯಸ್ಥ ರಕ್ಷಕ ಅಣ್ಣ ಮಾಬ್ಲು ಕರಿಯಾ ಗೌಡ ಇವರ ಹೆಸರಿಗೆ ದಾಖಲಾಗಿದ್ದು ನಂತರ ಗಂಡು ಸಂತತಿ ಇಲ್ಲದೇ ಇರುವುದರಿಂದ ಕೃಷ್ಣಾ ಸೋಮು ಗೌಡ 1ಃ3 ಅಂಶ, ಮಾಬ್ಲು ಹಾಗೂ ಬುದ್ದು ಗೌಡ ಇವರಿಗೆ ತಲಾ 1ಃ3 ಅಂಶ ಹಕ್ಕು ಪ್ರಾಪ್ತವಾಗಿದ್ದು. ನಂತರ ಮಾಬ್ಲು ಹಾಗೂ ಬುದ್ದು ಇವರ ಹಕ್ಕಿಗೆ ಸಂಬಂಧಿಸಿದಂತೆ ಬ್ಲಾಕ್ ನಂ.115 ಕ್ಷೇತ್ರ 00–09–00 ದಿನಾಂಕ 24.7.1981 ರಂದು ಬ್ಲಾಕ್ ನಂ.116 ಒಟ್ಟು ಕ್ಷೇತ್ರ 00–09–00 ದಿನಾಂಕ 16.1.1976 ರಂದು

ಭೂನ್ಯಾಯ ಮಂಡಳಿಯಿಂದ 1 ನೇ ಪ್ರತಿವಾದಿಗೆ ಮಂಜೂರಾಗಿದ್ದು ಇರುತ್ತದೆ. ನಂತರ ಮೂಲ ದಾವಾ ನಂ.91ಃ1995 ಪ್ರಕರಣ ನಡೆದು ಬ್ಲಾಕ್ ನಂ.116 ಕುರಿತು 1 ನೇ ಪ್ರತಿವಾದಿಯು ವಾದಿಯರ ಹಿಂದಿನ ಹಕ್ಕುದಾರರಾದ ಮಾಬ್ಲು ಕರಿಯಾ ಗೌಡ ಸಲ್ಲಿಸಿದ ದಾವೆಯನ್ನು ಮಾನ್ಯ ನ್ಯಾಯಾಲಯವು 17.10.2000 ದಂದು ವಜಾ ಮಾಡಿ ಡಿಕ್ರಿ ಮಾಡಿದ್ದು ಸದರ್ ಅದೇಶದ ವಿರುದ್ಧ 1 ನೇ ಪ್ರತಿವಾದಿ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ದಾವಾ ಆಸ್ತಿ ಕುರಿತು 9 ಗುಂಟೆ ಕ್ಷೇತ್ರಕ್ಕೆ ತಪ್ಪು ಸಮಜೂತ್ ನೀಡಿ ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿ ಅಧಿಭೋಗದಾರ ಹಕ್ಕು ಪಡೆದುಕೊಂಡ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಾದಿಯರು ರಿಟ್ ಪಿಟಿಷನ್ ನಂ.84595ಃ2013 ವಿಚಾರಣೆ ಬಾಕಿ ಇರುತ್ತದೆ. ಅಲ್ಲದೆ 1 ನೇ ಪ್ರತಿವಾದಿ ಡಿ.ಡಿ.ಎಲ್.ಆರ್. ಕಾರವಾರ ಇವರಲ್ಲಿ ಸಲ್ಲಿಸಿದ ಮೇಲ್ಮನವಿ ನಂ.18ಃ2012–13 ದಿನಾಂಕ 20.12.2012 ರಂದು ವಜಾಗೊಂಡಿದ್ದು, ಇರುತ್ತದೆ. ಅಲ್ಲದೆ ಹೊಸದಾಗಿ ಹಕ್ಕು ದಾಖಲೆ ಪ್ರಕಾರ ಪೋಡಿಗೆ ಕ್ರಮ ವಹಿಸುವುದು ಬಾಕಿ ಇದ್ದು 1 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಮನೆ ಕಟ್ಟಲು ತಯಾರಿ ನಡೆಸಿದ್ದರಿಂದ 1 ನೇ ಪ್ರತಿವಾದಿಯ ವಿರುದ್ಧ ದಾವೆಯನ್ನು ದಾಖಲಿಸಿದ್ದು ಇರುತ್ತದೆ ಎಂದು ಹೇಳಿಕೊಂಡಿದ್ದು ಇರುತ್ತದೆ.

12. 1 ನೇ ಪ್ರತಿವಾದಿಯ ಪ್ರಕಾರ ದಾವಾ ಆಸ್ತಿಯು ತನಗೆ 1981 ನೇ ಇಸವಿಯಲ್ಲಿ ಭೂನ್ಯಾಯ ಮಂಡಳಿಯಿಂದ ಮಂಜೂರಾಗಿದ್ದು ಅಲ್ಲಿಂದ ಇಲ್ಲಿಯವರೆಗೆ ತಾನೇ ಕಬ್ಜಾ ಸಾಗುವಳಿ ಮಾಡಿಕೊಂಡು ಬಂದಿದ್ದು ಮತ್ತು ದಾವಾ ಆಸ್ತಿಯಲ್ಲಿ ಮನೆಯನ್ನು ಕಟ್ಟಿ ವಾಸ್ತವ್ಯ ಮಾಡಿಕೊಂಡು ಬಂದಿದ್ದು ಆ ಕಾರಣ ದಾವಾ ಆಸ್ತಿ ತನಗೆ ಸೇರಿದ್ದು

ಮತ್ತು ಸದರ್ ಆಸ್ತಿಯ ಮೇಲೆ ವಾದಿಯರಿಗೆ ಯಾವುದೇ ಹಕ್ಕು ಇರುವುದಿಲ್ಲ. ಆ ಕಾರಣ, ದಾವೆಯನ್ನು ವಜಾಗೊಳಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

13. ವಾದಿಯರು ತಮ್ಮ ಅರ್ಜಿಗೆ ಪೂರಕವಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

1. ಡಿ.ಡಿ.ಎಲ್.ಆರ್. ಕಾರವಾರ ಇವರ ಪ್ರಕರಣ ಸಂಖ್ಯೆ 18ಃ2012–13 ರ ಆದೇಶದ ಪ್ರತಿ
2. ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ರವರ ರಿಟ್ ಪಿಟಿಷನ್ ನಂ.84595ಃ2013 ರಲ್ಲಿಯ ಇಂಡೆಕ್ಸ್ ಹಾಗೂ ಮೆಮೊರ್ಯಾಂಡಂ ಆಫ್ ರಿಟ್ ಪಿಟಿಷನ್
3. ಶಿರಕುಳಿ ಗ್ರಾಮದ ಎರಡು ಹಕ್ಕು ಪತ್ರಿಕೆಗಳು
4. ಸರ್ವೆ ನಂ.115 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆ
5. ಫಾರಂ ನಂ.7
6. ಭೂನ್ಯಾಯ ಮಂಡಳಿಯ ಅದೇಶದ ಪ್ರತಿ ದಿನಾಂಕ 24.7.1981
7. ಪಟ್ಟಾ ಪ್ರತಿ
8. ಮಾಬ್ಲು ಕರಿಯಾ ಗೌಡ ಈತನ ಮರಣ ದಾಖಲೆ
9. ಬುದ್ದು ಗೌಡ ಈತನ ಮರಣ ದಾಖಲೆ
10. ತಹಶೀಲ್ದಾರ್ ಕಾರ್ಯಾಲಯ, ಅಂಕೋಲಾರವರ ದಿನಾಂಕ 10.2.2011 ರ ನೋಟೀಸು
11. ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ರಿಟ್ ಪಿಟಿಷನ್ ನಂ.84595ಃ2013 ರಲ್ಲಿಯ ಆದೇಶದ ಪ್ರತಿ
12. ಅಸಲು ದಾವಾ ನಂ.91ಃ1995 ರ ಆದೇಶದ ಪ್ರತಿ
13. ಅಸಲು ದಾವಾ ನಂ.91ಃ1995 ರ ಡಿಕ್ರಿ ಕಾಪಿ
14. ಸರ್ವೆ ನಂ.115ಃ1 ನೇದ್ದರ ಪಹಣಿ ಪತ್ರಿಕೆ
15. ಸರ್ವೆ ನಂ.115ಃ2 ನೇದ್ದರ ಪಹಣಿ ಪತ್ರಿಕೆ
16. ಸರ್ವೆ ನಂ.115ಃ3 ನೇದ್ದರ ಪಹಣಿ ಪತ್ರಿಕೆ
17. ಸರ್ವೆ ನಂ.115ಃ4 ನೇದ್ದರ ಪಹಣಿ ಪತ್ರಿಕೆ
18. ಸರ್ವೆ ನಂ.115ಃ5 ನೇದ್ದರ ಪಹಣಿ ಪತ್ರಿಕೆ
19. ಎರಡು ಫೋಟೋ
20. ಗಜಾನನ ಜಾನು ನಾಯ್ಕ ತಹಶೀಲ್ದಾರ್ ಅಂಕೋಲಾರವರಿಗೆ ಬರೆದ ಅರ್ಜಿ
21. ದೇವಿ ಕೋಂ ಬುದ್ದು ಗೌಡ ಇವರು ತಹಶೀಲ್ದಾರ್ ಅಂಕೋಲಾರವರಿಗೆ ಬರೆದ ಅರ್ಜಿ
22. ಶಂಕರ ಮಹಾದೇವ ಶೆಟ್ಟಿ ಇವರು ತಹಶೀಲ್ದಾರ್,

ಅಂಕೋಲಾರವರಿಗೆ ಬರೆದ ಅರ್ಜಿ
23. ಸರ್ವೆ ನಂ.115ಕ್ಕೆ ಸಂಬಂಧಿಸಿದ ಸರ್ವೆ ನಕಾಶೆ
24. ಅಧ್ಯಕ್ಷರು, ಗ್ರಾಮ ಪಂಚಾಯತಿ, ಅಲಗೇರಿ ಲಕ್ಷ್ಮೀ ಮಂಗೇಶ ಶೆಟ್ಟಿ ಇವರಿಗೆ ಬರೆದ ಅರ್ಜಿ
25. ಶಂಕರ ಬುದ್ದು ಗೌಡ ಇವರು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಇವರಿಗೆ ಸಲ್ಲಿಸಿದ ತಕರಾರು ಅರ್ಜಿ

14. 1 ನೇ ಪ್ರತಿವಾದಿಯು ತಮ್ಮ ಪ್ರಕರಣಕ್ಕೆ ಪೂರಕವಾಗಿ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

1. ಅಸಲು ದಾವಾ ನಂ.6ಃ2010 ರ ಆದೇಶದ ಪ್ರತಿ
2. ಡಿ.ಡಿ.ಎಲ್.ಆರ್; ಕಾರವಾರ ರವರ ಪ್ರಕರಣ ಸಂಖ್ಯೆ 18ಃ12-13
3. ಅಶೋಕ ಶೆಟ್ಟಿ ಇವರ ಆದಾರ್ ಕಾರ್ಡ್
4. 1 ನೇ ಪ್ರತಿವಾದಿಯ ಕುಟುಂಬದ ಪಡಿತರ ಚೀಟಿ
5. 1 ನೇ ಪ್ರತಿವಾದಿಯ ಆಧಾರ್ ಕಾರ್ಡ್
6. ಲಕ್ಷ್ಮೀ ಶೆಟ್ಟಿ ಇವಳ ಆಧಾರ್ ಕಾರ್ಡ್
7. ಡಿ.ಡಿ.ಎಲ್.ಆರ್. ಕಾರವಾರ ನ್ಯಾಯಾಲಯದಲ್ಲಿ ಸಲ್ಲಿಸಿದ ಅಪೀಲು
8. 1 ನೇ ಪ್ರತಿವಾದಿಯ ಚುನಾವಾ ಗುರುತಿನ ಚೀಟಿ
9. ಲಕ್ಷ್ಮೀ ಶೆಟ್ಟಿ ಇವರ ಚುನಾವಣಾ ಗುರುತಿನ ಚೀಟಿ
10. ಅಶೋಕ ಶೆಟ್ಟಿ ಇವರ ಚುನಾವಣಾ ಗುರುತಿನ ಚೀಟಿ
11. ಸರ್ವೆ ನಂ.115ಃ3 ಪಹಣಿ ಪತ್ರಿಕೆ
12. ಸರ್ವೆ ನಕಾಶೆ
13. ಸರ್ವೆ ನಂ.115ಃ3 ರ ಕುರಿತು ಸರ್ವೆ ನಕಾಶೆ
14. ಗ್ರಾಮ ಪಂಚಾಯತಿ ರವರು ನೀಡಿದ ಸಾಮಾನ್ಯ ರಶೀದಿ
15. ಫೋಟೋ
16. ಭೂ ನ್ಯಾಯ ಮಂಡಳಿ ಆದೇಶದ ಪ್ರತಿ
17. ಪೋಟೋ
18. ತಿಳುವಳಿಕೆ ನೋಟಿಸ

15. ವಾದಿಯರ ಹಾಗೂ 1ನೇ ಪ್ರತಿವಾದಿಯರ ವಾದ ಹಾಗೂ ಪ್ರತಿವಾದ ಪತ್ರಗಳನ್ನು ಅವಲೋಕಿಸಿದಾಗ ಮತ್ತು ವಾದಿಯರ ಹಾಗೂ 1 ನೇ ಪ್ರತಿವಾದಿ ಪರ ವಕೀಲರ ವಾದಗಳನ್ನು ಅವಲೋಕಿಸಿದ ನಂತರ ಪ್ರಕರಣದಲ್ಲಿ ಕಂಡು ಬರುವ ಮುಖ್ಯ ವಿವಾದವೇನೆಂದರೆ, 1 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಭೂನ್ಯಾಯ ಮಂಡಳಿ ಪ್ರಕಾರ

ರೈತಾಪಿ ಹಕ್ಕು ಮಂಜೂರು ಮಾಡಿಸಿಕೊಳ್ಳುವಾಗ ತಪ್ಪು ಮಾಹಿತಿ ನೀಡಿ ಮಂಜೂರು ಮಾಡಿಸಿಕೊಂಡಿರುತ್ತಾನೆ ಮತ್ತು ತಾನೇ ಡಿ.ಡಿ.ಎಲ್.ಆರ್, ಕಾರವಾರ ಇವರ ನ್ಯಾಯಾಲಯದಲ್ಲಿ ಪೋಟ್ ಹಿಸ್ಸಾ ಸಂಬಂಧ ಪ್ರಕರಣ ದಾಖಲಿಸಿದ್ದು ಸದರ್ ಪ್ರಕರಣದಲ್ಲಿ ಹೊಸದಾಗಿ ಪೋಡಿ ಕ್ರಮ ವಹಿಸಲು ಆದೇಶವಾಗಿದ್ದು, ಮತ್ತು 1 ನೇ ಪ್ರತಿವಾದಿಯ ಪರ ರೈತಾಪಿ ಹಕ್ಕನ್ನು ಮಂಜೂರು ಮಾಡಿರುವ ಕುರಿತು ವಾದಿಯರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದು ಸದರ್ ರಿಟ್ ಅರ್ಜಿ ವಿಚಾರಣೆಗೆ ಬಾಕಿ ಇರುವಾಗ 1 ನೇ ಪ್ರತಿವಾದಿ ಮನೆಯನ್ನು ಕಟ್ಟಲು ಪ್ರಯತ್ನಿಸುತ್ತಿದ್ದಾನೆ, ಆತನಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ನಿರ್ಧಾರವಾಗುವತನಕ ಮನೆ ಕಟ್ಟಲು ಬರುವುದಿಲ್ಲ ಎಂದು ವಾದಿಯರು ಪ್ರತಿಪಾದಿಸಿದ್ದು ಆದರೆ 1 ನೇ ಪ್ರತಿವಾದಿಯು ತನಗೆ ಭೂನ್ಯಾಯ ಮಂಡಳಿಯಿಂದ ಈಗಾಗಲೇ ರೈತಾಪಿ ಹಕ್ಕು ಮಂಜೂರಾಗಿದ್ದು ತಾನೇ ದಾವಾ ಆಸ್ತಿಯಲ್ಲಿ 1981 ನೇ ಇಸವಿ ಅಥವಾ ಅದಕ್ಕೂ ಪೂರ್ವದಿಂದಲೂ ಸ್ವಾಧೀನಾನುಭವ ಹೊಂದಿ ವಾಸದ ಮನೆಯನ್ನು ಕಟ್ಟಿಕೊಂಡು ವಾಸಿಸುತ್ತಾ ಬಂದಿರುತ್ತೇನೆ ಎಂದು ಹೇಳಿದ್ದು ಇರುತ್ತದೆ.

16. ಉಭಯ ಪಕ್ಷಗಾರರು ಹಾಜರುಪಡಿಸಿದ ದಾಖಲೆಗಳನ್ನು ಅವಲೋಕಿಸಿದಾಗ 1 ನೇ ಪ್ರತಿವಾದಿಯ ಪರವಾಗಿ ಭೂನ್ಯಾಯ ಮಂಡಳಿಯಿಂದ ರೈತಾಪಿ ಹಕ್ಕು ಮಂಜೂರಾಗಿರುವ ಕುರಿತು ವಾದಿಯರೇ ಭೂನ್ಯಾಯ ಮಂಡಳಿಯ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು ಸದರಿ ಭೂನ್ಯಾಯ ಮಂಡಳಿಯ ಆದೇಶದಲ್ಲಿ ದಿನಾಂಕ 24.7.1981 ರಂದು 1 ನೇ ಪ್ರತಿವಾದಿಯ ಪರವಾಗಿ ಶಿರಕುಳಿ ಗ್ರಾಮದ ಸರ್ವೆ ನಂ.115 ರಲ್ಲಿ 9 ಗುಂಟೆ ಕ್ಷೇತ್ರಕ್ಕೆ ರೈತಾಪಿ ಹಕ್ಕನ್ನು

ಮಂಜೂರು ಮಾಡಿದ್ದು ಇರುತ್ತದೆ. ಅಲ್ಲದೆ ಸದರಿ ರೈತಾಪಿ ಹಕ್ಕನ್ನು ಮಂಜೂರು ಮಾಡಿರುವ ಕುರಿತು ಪಟ್ಟಾ ಸಹ ನೀಡಿದ್ದು ಇರುತ್ತದೆ. ಸದರಿ ಎರಡೂ ದಾಖಲೆಗಳು 1 ನೇ ಪ್ರತಿವಾದಿಗೆ ಭೂನ್ಯಾಯ ಮಂಡಳಿಯಿಂದ ಪ್ರಾಪ್ತವಾಗಿ ಆತನ ಹೆಸರಿಗೆ ದಾಖಲಾಗಿರುವ ಬಗ್ಗೆ ಮೇಲ್ನೋಟಕ್ಕೆ ಗೋಚರಿಸುತ್ತವೆ. ಸದರಿ ಭೂನ್ಯಾಯ ಮಂಡಳಿಯ ಅದೇಶವನ್ನು ವಾದಿಯರು ರಿಟ್ ಅರ್ಜಿ ನಂ.84595ಃ 2013 ನೇದ್ದರ ಪ್ರಕಾರ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡದಲ್ಲಿ ಪ್ರಶ್ನೆ ಮಾಡಿ ಅಪೀಲು ಸಲ್ಲಿಸಿದ್ದು ಆದರೆ ವಾದಿಯರು ಮಾನ್ಯ ಉಚ್ಚ ನ್ಯಾಯಾಲಯದಿಂದ ಭೂನ್ಯಾಯ ಮಂಡಳಿಯ ಆದೇಶಕ್ಕೆ ತಡೆ ನೀಡಿರುವ ಕುರಿತು ಯಾವುದೇ ಆದೇಶವನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೆ 1 ನೇ ಪ್ರತಿವಾದಿಯು ಹಾಜರುಪಡಿಸಿದಂತಹ ದಾಖಲೆಗಳನ್ನು ಅವಲೋಕಿಸಿದಾಗ ಮೂಲ ದಾವಾ ನಂ.6ಃ2010 ರಲ್ಲಿ 2 ನೇ ಪ್ರತಿವಾದಿಯ ವಿರುದ್ಧ ದಾವಾ ಸರ್ವೆ ನಂ.115ಃ3 ಕ್ಕೆ ಸಂಬಂಧಿಸಿದಂತೆ ಉತ್ತರದ ಪಾಗಾರದ ಗೋಡೆಯನ್ನು ಒಡೆದು ಅತಿಕ್ರಮಣ ಮಾಡದಂತೆ ನಿರಂತರ ನಿಷೇಧಾಜ್ಞೆ ಡಿಕ್ರಿ ಆದೇಶವನ್ನು 2 ನೇ ಪ್ರತಿವಾದಿಯ ವಿರುದ್ದ ಮಾಡಿದ್ದು ಇರುತ್ತದೆ. ಮತ್ತು ಸದರ್ ತೀರ್ಪಿನಲ್ಲಿ ನ್ಯಾಯಾಲಯವು ದಾವೆಯ ವಾದಿ ಅಂದರೆ ಈ ಪ್ರಕರಣದ 1 ನೇ ಪ್ರತಿವಾದಿಯು ದಾವಾ ಸರ್ವೆ ನಂ.115ಃ3 ರಲ್ಲಿ ಸ್ವಾಧೀನತೆ ಹೊಂದಿರುತ್ತಾನೆ ಎಂದು ಉಲ್ಲೇಖಿಸಿದ್ದು ಇರುತ್ತದೆ. ಅಲ್ಲದೆ 1 ನೇ ಪ್ರತಿವಾದಿ ಹಾಜರುಪಡಿಸಿದ ಸರ್ವೆ ನಂ.115ಃ3 ರ ಪಹಣಿ ಪತ್ರಿಕೆಯಲ್ಲಿ 1 ನೇ ಪ್ರತಿವಾದಿಯ ಹೆಸರು ಮಾಲೀಕ ಮತ್ತು ಕಬ್ಜಾದಾರ ಎಂದು ಮೇಲ್ನೋಟಕ್ಕೆ ಈ ಹಂತದಲ್ಲಿ ಕಂಡು ಬರುತ್ತದೆ. ಈ ಎಲ್ಲಾ ದಾಖಲೆಗಳನ್ನು ಅವಲೋಕಿಸಿದಾಗ 1 ನೇ ಪ್ರತಿವಾದಿಗೆ 1981 ರಲ್ಲಿ ಭೂನ್ಯಾಯ ಮಂಡಳಿಯಿಂದ 00–09–00 ಕ್ಷೇತ್ರಕ್ಕೆ ರೈತಾಪಿ ಹಕ್ಕು ಮಂಜೂರಾದ

ನಂತರ ಆತನು ಕಬ್ಜೆ ಹೊಂದಿ ಸದರ್ ಸ್ಥಳದಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಾಗಿರುವುದು ಸ್ಪಷ್ಟಪಡಿಸುತ್ತವೆ. ಅಲ್ಲದೆ ಗ್ರಾಮ ಪಂಚಾಯತಿಯವರು ನೀಡಿರುವ ಸಾಮಾನ್ಯ ರಶೀದಿ ದಾಖಲೆಯು ಸಹ 1 ನೇ ಪ್ರತಿವಾದಿ ತನಗೆ ಮಂಜೂರಾದ ಆಸ್ತಿಯಲ್ಲಿ ವಾಸ್ತವ್ಯ ಹೊಂದಿರುತ್ತಾನೆ ಎಂದು ಮೇಲ್ನೋಟಕ್ಕೆ ಗೋಚರಿಸುತ್ತದೆ.

17. ವಾದಿಯರು 1 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಹಕ್ಕು ನಿರ್ಧಾರವಾಗುವ ತನಕ ಆತನು ಯಾವುದೇ ಮನೆಯನ್ನು ಕಟ್ಟಲು ಬರುವುದಿಲ್ಲ ಎಂದು ಆಧರಿಸುತ್ತಿದ್ದು, ಆದರೆ ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೇನೆಂದರೆ, ವಾದಿಯರು ತಮಗೆ ದಾವಾ ಆಸ್ತಿಯಲ್ಲಿ ಯಾವ ರೀತಿ ಹಕ್ಕು ಮತ್ತು ಹಿತಾಸಕ್ತಿ ಇರುತ್ತದೆ ಎಂಬ ಬಗ್ಗೆ ಸ್ಪಷ್ಟವಾಗಿ ವಾದ ಪತ್ರದಲ್ಲಿ ಹೇಳಿಕೊಂಡಿರುವುದಿಲ್ಲ. ವಾದ ಪತ್ರದಲ್ಲಿರುವ ಸಂಪೂರ್ಣ ಅಂಶಗಳನ್ನು ಅವಲೋಕಿಸಿದಾಗ 1 ನೇ ಪ್ರತಿವಾದಿಯ ವಿರುದ್ಧ ಸಾಕಷ್ಟು ಅಂಶಗಳನ್ನು ಹೇಳಿಕೊಂಡಿದ್ದು, ಅಂದರೆ 1 ನೇ ಪ್ರತಿವಾದಿಗೆ ಹೇಗೆ ದಾವಾ ಆಸ್ತಿ ಮಂಜೂರಾಯಿತು ಮತ್ತು ಆತ ಹೇಗೆ ವಾಸ್ತವ್ಯ ಇದ್ದಾನೆ ಎಂಬ ಇತ್ಯಾದಿ ಉಲ್ಲೇಖ ಮಾಡಿದ್ದು ಆದರೆ ವಾದಿಯರು ತಮಗೆ ಯಾವ ರೀತಿ ಹಕ್ಕು ಇರುತ್ತದೆ ಎಂಬ ಬಗ್ಗೆ ಹಾಗೂ ತಮ್ಮ ಹಕ್ಕನ್ನು ಘೋಷಿಸುವಂತೆ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಂಡಿರುವುದಿಲ್ಲ. 1 ನೇ ಪ್ರತಿವಾದಿಯ ಹಕ್ಕು ನಿರ್ಧಾರ ಆಗುವತನಕ ಆತನ ಮನೆ ಕಟ್ಟಬಾರದು ಎಂದು ಹೇಳಿರುವುದನ್ನು ಅವಲೋಕಿಸಿದಾಗ 1 ನೇ ಪ್ರತಿವಾದಿಗೆ ಈಗಾಗಲೇ ಭೂನ್ಯಾಯ ಮಂಡಳಿಯಿಂದ ದಾವಾ ಆಸ್ತಿ ಮಂಜೂರಾಗಿದ್ದು ಆತನು ದಾವಾ ಆಸ್ತಿಯಲ್ಲಿ ವಾಸ್ತವ್ಯ ಇರುವುದು ಮೇಲ್ನೋಟಕ್ಕೆ ಕಂಡು ಬರುವುದರಿಂದ, ವಾದಿಯರು ತಮಗೆ ಯಾವ ರೀತಿ ಹಕ್ಕು ಇರುತ್ತದೆ ಎನ್ನುವುದನ್ನು

ನ್ಯಾಯಾಲಯಕ್ಕೆ ಸರಿಯಾಗಿ ಮನವರಿಕೆ ಮಾಡಿಕೊಡದೇ ಇರುವುದರಿಂದ ನನ್ನ ಅಭಿಪ್ರಾಯದ ಪ್ರಕಾರ ವಾದಿಯರಿಗೆ ಮೇಲ್ನೋಟಕ್ಕೆ ಪ್ರಕರಣ ತಮ್ಮ ಪರವಾಗಿ ಇಲ್ಲದಿರುವುದು ಕಂಡು ಬರುತ್ತದೆ. ಅಂದರೆ 1 ನೇ ಪ್ರತಿವಾದಿ ತಾನು ಮಾಲೀಕ ಮತ್ತು ಕಬ್ಜಾದಾರ ಇರುತ್ತೇನೆ ಎಂದು ಮೇಲ್ನೋಟಕ್ಕೆ ಈ ಹಂತದಲ್ಲಿ ತೋರಿಸಿಕೊಟ್ಟಿರುತ್ತಾನೆ.

18. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆನೆಂದರೆ, 2 ಮತ್ತು 3 ನೇ ಪ್ರತಿವಾದಿಯರು ಖರೀದಿದಾರರು ಎಂದು ವಾದ ಪತ್ರದಲ್ಲಿ ಹೇಳಿದ್ದು, ಆದರೆ ಅವರ ವಿರುದ್ದ ದಾವೆಯಲ್ಲಿ ಯಾವುದೇ ಮಾಗಣಿ ಮಾಡಿರುವುದಿಲ್ಲ. ವಾದ ಪತ್ರದ 3 ನೇ ಖಂಡಿಕೆಯ ಕೊನೆಯಲ್ಲಿ 2 ಮತ್ತು 3 ನೆ ಪ್ರತಿವಾದಿಯರಿಗೆ ತೊಂದರೆ ಆಗುತ್ತದೆ ಅಂತಾ ಹೇಳಿದ್ದು, ಯಾವ ರೀತಿ ಅವರಿಗೆ ತೊಂದರೆ ಆಗುತ್ತದೆ ಎನ್ನುವದನ್ನು ಮನವರಿಕೆ ಮಾಡಿಕೊಟ್ಟಿರುವುದಿಲ್ಲ. ಅಲ್ಲದೇ ವಾದಿಯರು ಡಿ.ಡಿ.ಎಲ್.ಆರ್.ಪ್ರ.ಸಂಖ್ಯೆ.18/12–13 ರ ಆದೇಶದ ಪ್ರಕಾರ 1 ನೆ ಪ್ರತಿವಾದಿ ನಡೆದುಕೊಂಡಿಲ್ಲ ಅಂತಾ ಆಧರಿಸುತ್ತಿದ್ದು, ಒಂದಾನುವೇಳೆ ಸದರ ಆದೇಶದ ಪ್ರಕಾರ 1 ನೇ ಪ್ರತಿವಾದಿ ಅಥವಾ ಕಂದಾಯ ಅಧಿಕಾರಿಗಳು ಕ್ರಮ ಕೈಗೊಳ್ಳದಿದ್ದರೆ ಅದನ್ನು ವಾದಿಯರು ಸಂಬಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಕ್ರಮ ಜರುಗಿಸಲು ಪ್ರಯತ್ನ ಮಾಡಬಹುದಿತ್ತು ಅಂತಹ ಕ್ರಮ ಜರುಗಿಸಲು ಯಾವುದೇ ಕ್ರಮ ಕೈಗೊಂಡ ಬಗ್ಗೆ ನ್ಯಾಯಾಲಯದಲ್ಲಿ ಯಾವುದೇ ದಾಖಲೆಗಳು ಕಂಡುಬರುತ್ತಿಲ್ಲ. ಆದ್ದರಿಂದ ನನ್ನ ಅಭಿಪ್ರಾಯದ ಪ್ರಕಾರ ಮೇಲ್ನೋಟಕ್ಕೆ ವಾದಿಯರ ಪರವಾಗಿ ಪ್ರಕರಣ ಇಲ್ಲದಿರುವುದು ಕಂಡು

ಬರುತ್ತದೆ. ಆದ್ದರಿಂದ ನಾನು ಅಂಶ ನಂ.1ಕ್ಕೆ ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

19. **<u>ಅಂಶ ನಂ.2 ಮತ್ತು 3</u>**:– ಈ ಎರಡೂ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಚರ್ಚೆಯ ಪುನರಾವರ್ತನೆಯನ್ನು ತಡೆಯಲು ಸದರಿ ಅಂಶಗಳನ್ನು ಏಕಕಾಲಕ್ಕೆ ಚರ್ಚಿಸಲಾಗಿರುತ್ತದೆ.

20. ಯಾವಾಗ ದಾವೆ ಮೇಲ್ನೋಟಕ್ಕೆ ತಮ್ಮ ಪರವಾಗಿ ಇರುತ್ತದೆ ಎನ್ನುವುದನ್ನು ತೋರ್ಪಡಿಸಲು ವಾದಿಯರು ವಿಫಲರಾಗಿರುತ್ತಾರೋ ಅಂತಹ ಸಮಯದಲ್ಲಿ ಅಂಶ ನಂ.2 ಮತ್ತು 3 ನ್ನು ಚರ್ಚಿಸುವ ಅವಶ್ಯಕತೆ ಇಲ್ಲದಿದ್ದಾಗ್ಯೂ, 1 ನೇ ಪ್ರತಿವಾದಿ ಹಾಜರುಪಡಿಸಿದ ದಾಖಲೆಗಳನ್ನು ಅವಲೋಕಿಸಿದಾಗ ಆತನು ಮನೆಯನ್ನು ಕಟ್ಟುತ್ತಿದ್ದು ಆತನು ತನ್ನ ಹೆಂಡತಿಯ ಪರವಾಗಿ ಮಂಜೂರಾದ ಆಸ್ತಿಯಲ್ಲಿ ಮನೆಯನ್ನು ಕಟ್ಟುತ್ತಿದ್ದು ಮತ್ತು 1 ನೇ ಪ್ರತಿವಾದಿಯು ತನ್ನ ತಕರಾರಿನಲ್ಲಿ ಮನೆಯನ್ನು ಕಟ್ಟಲು ಈಗಾಗಲೇ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಂಡಿದ್ದು, ಅಂದರೆ, ಕಲ್ಲು, ಸಿಮೆಂಟ ಮತ್ತು ರೇತಿ ಇತ್ಯಾದಿ ಸಂಗ್ರಹ ಮಾಡಿಕೊಂಡು ಹಣವನ್ನು ಖರ್ಚು ಮಾಡಿಕೊಂಡಿರುತ್ತೇನೆ ಅಂತಾ ತಕರಾರಿನಲ್ಲಿ ಹೇಳಿದ ಅಂಶಗಳನ್ನು ಗಮನಿಸಿದಾಗ, ಆತನಿಗೆ ಮನೆಯನ್ನು ಕಟ್ಟದಂತೆ ನಿರ್ಬಂಧಿಸಿದರೆ ತುಂಬಾ ಹಾನಿಯುಂಟಾಗುವ ಸಂಭವ ಇರುತ್ತದೆ. ಅಲ್ಲದೆ ವಾದಿಯರು ತಮ್ಮ ಪರವಾಗಿ ಬ್ಯಾಲೆನ್ಸ್ ಆಫ್ ಕನ್ವೀನಿಯನ್ಸ ಇದೆ ಎನ್ನುವುದನ್ನು ತೋರಿಸಿಕೊಟ್ಟಿರುವುದಿಲ್ಲ. ಒಂದಾನು ವೇಳೆ ಅರ್ಜಿಯನ್ನು ಪುರಸ್ಕರಿಸಿದರೆ ವಾದಿಯರಿಗಿಂತ 1 ನೇ ಪ್ರತಿವಾದಿಗೆ ಹೆಚ್ಚು ಲುಕ್ಸಾನು ಆಗುವ ಸಂಭವ ಇರುತ್ತದೆ.

21. ವಾದ ಮಂಡನೆಯ ಸಮಯದಲ್ಲಿ ವಾದಿಯರ ಪರ ವಕೀಲರು ವಾದ ಮಂಡಿಸುತ್ತಾ 1 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಹೊಸದಾಗಿ ಮನೆಯನ್ನು ಕಟ್ಟಲು ಪ್ರಯತ್ನ ನಡೆಸಿದ್ದು, ಆತನು ಮನೆಯನ್ನು ಕಟ್ಟಿದರೆ ವಾದಿಯರ ಹಕ್ಕಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ, ಹೀಗಾಗಿ 1 ನೇ ಪ್ರತಿವಾದಿಯನ್ನು ಮನೆ ಕಟ್ಟದಂತೆ ನಿಬಂಧಿಸುವುದು ಅವಶ್ಯಕತೆ ಇರುತ್ತದೆ. ಆ ಕಾರಣ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿ 1 ನೇ ಪ್ರತಿವಾದಿಯ ವಿರುದ್ಧ ತಾತ್ಪೂರ್ತಿಕ ತಡೆಯಾಜ್ಞೆ ಹೊರಡಿಸಬೇಕೆಂದು ಕೋರಿಕೊಳ್ಳುತ್ತಾ ತಮ್ಮ ವಾದ ಮಂಡನೆಗೆ ಪೂರಕವಾಗಿ ಈ ಕೆಳಗಿನ ತೀರ್ಪುಗಳನ್ನು ಉದಾಹರಿಸಿರುತ್ತಾರೆ.

1. **MFA NO.3921/2012**
2. **2017(4) SCALE 527**
3. **2013(1) KLJ 197 (SC)**
4. **ILR 2004 KAR 4076**

22. 1 ನೇ ಪ್ರತಿವಾದಿಯ ಪರ ವಕೀಲರು ವಾದ ಮಂಡಿಸುತ್ತಾ 1 ನೇ ಪ್ರತಿವಾದಿಗೆ ಭೂ ನ್ಯಾಯ ಮಂಡಳಿಯಿಂದ ದಾವಾ ಆಸ್ತಿಯಲ್ಲಿ 00-09-00 ಜಮೀನು ಮಂಜೂರಾಗಿ ಪಟ್ಟಾ ನೀಡಿದ್ದು, ಆ ಪ್ರಕಾರ 1 ನೇ ಪ್ರತಿವಾದಿಯು ತನಗೆ ಮಂಜೂರಾದ ಆಸ್ತಿಯನ್ನು ಕಬ್ಜಾ ಹೊಂದಿ ವಹಿವಾಟು ಉಪಬೋಗ ಮಾಡಿಕೊಂಡು ಬಂದಿದ್ದು, ದಾವಾ ಆಸ್ತಿಯ 00-09-00 ಆಸ್ತಿಗೆ 1 ನೇ ಪ್ರತಿವಾದಿಯೇ ಮಾಲೀಕ ಹಾಗೂ ಕಬ್ಜಾದಾರನಾಗಿದ್ದು, ಈಗ ಸರ್ಕಾರದ ಅಡಿಯಲ್ಲಿ ಮನೆಯನ್ನು ಕಟ್ಟಿಕೊಳ್ಳುತ್ತಿದ್ದು, ಆತನ ವಿರುದ್ದ ಆದೇಶ ಮಾಡಿದರೇ ಆತನಿಗೆ

ತುಂಬಾ ಹಾನಿ ಉಂಟಾಗುತ್ತದೆ. ಅಲ್ಲದೇ ವಾದಿಯರು ಇಷ್ಟು ವರ್ಷ ಸುಮ್ಮನಿದ್ದು ಈಗ 2 ಮತ್ತು 3 ನೇ ಪ್ರತಿವಾದಿಯರೊಂದಿಗೆ ಮಿಲಾಪಿಯಾಗಿ 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವೆಯನ್ನು ದಾಖಲಿಸಿ ಮಧ್ಯಂತರ ಅರ್ಜಿಯನ್ನು ಸಹಾ ದಾಖಲಿಸಿದ್ದು, ಆ ಕಾರಣ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ. ಸದರ 1 ನೇ ಪ್ರತಿವಾದಿಯ ಪರ ವಕೀಲರು ತಮ್ಮ ವಾದ ಮಂಡನೆಗೆ ಪೂರಕವಾಗಿ ಈ ಕೆಳಗಿನ ತೀರ್ಪನ್ನು ಉದಾಹರಿಸಿರುತ್ತಾರೆ.

1. 2014 AIAR (Civil) 572
2. ILR 1990 KAR SN 2.

23. ವಾದಿಯರ ಹಾಗೂ 1 ನೇ ಪ್ರತಿವಾದಿ ಪರ ವಕೀಲರು ಉದಾಹರಿಸಿದ ತೀರ್ಪುಗಳನ್ನು ಎಚ್ಚರಿಕೆಯಿಂದ ಗಮನಿಸಲಾಯಿತು. 1 ನೇ ಪ್ರತಿವಾದಿ ಪರ ವಕೀಲರು ಉದಾಹರಿಸಿದ 2014 AIAR (Civil) 572 ನೇ ತೀರ್ಪಿನ 12 ನೇ ಖಂಡಿಕೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ಹೇಳಲಾಗಿರುತ್ತದೆ.

> *"Suffice it to that the three basic ingredients while considering an application for grant of injunction which are establishment of prima facie case, actual physical possession of the property in question and last but not the least balance of convenience and hardship are the three determining factors to claim an order of temporary injunction in the pending suit."*

ಸದರಿ ಮೇಲಿನ ತೀರ್ಪು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುತ್ತದೆ ಏಕೆಂದರೆ ಪ್ರಸ್ತುತ ಪ್ರಕರಣದಲ್ಲಿಯೂ ಸಹ ವಾದಿಯರು ಸದರಿ ಮೂರು ಅಂಶಗಳನ್ನು ರುಜುವಾತು ಪಡಿಸದೇ ಇರುವುದರಿಂದ 1 ನೇ ಪ್ರತಿವಾದಿಯ ವಿರುದ್ದ ತಾತ್ಕೂರ್ತಿಕ ತಡೆಯಾಜ್ಞೆ ಆದೇಶವನ್ನು ಹೊರಡಿಸಲು ಬರುವುದಿಲ್ಲ.

24. ಈಗಾಗಲೇ ಮೇಲೆ ಚರ್ಚಿಸಿದಂತೆ, ಒಂದಾನುವೇಳೆ ಅರ್ಜಿಯನ್ನು ಪುರಸ್ಕರಿಸದರೆ ವಾದಿಯರಿಗಿಂತ 1 ನೇ ಪ್ರತಿವಾದಿಗೆ ಹೆಚ್ಚು ಲುಕ್ಸಾನು ಆಗುವ ಸಾದ್ಯತೆ ಇರುವುದರಿಂದ ಮತ್ತು ಬ್ಯಾಲೆನ್ಸ ಆಫ ಕನ್ವವಿನಿಯನ್ಸ ವಾದಿಯರ ಪರವಾಗಿ ಇಲ್ಲದೆ ಇರುವುದರಿಂದ ನಾನು ಅಂಶ ನಂ. 2 ಮತ್ತು 3 ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

25. **ಅಂಶ ನಂ.4**ಃ– ಈ ಮೇಲೆ ನಮೂದಿಸಿದ ಕಾರಣ ವ ಸಂಗತಿಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿರುತ್ತದೆಃ

**ಆದೇಶ**

ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 39 ನಿಯಮ 1 ಮತ್ತು 2 ಹಾಗೂ ಸಹ ಕಲಂ 151 ರ ಅಡಿಯಲ್ಲಿ ಸಲ್ಲಿಸಿದ 1 ನೇ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕರಿಸಿದ ನಂತರ ತಿದ್ದುಪಡಿ ಮಾಡಿ ಪರಿಶೀಲಿಸಿ ನಂತರ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 28ನೇ ಏಪ್ರಿಲ 2018 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ಶಂಭುಲಿಂಗಯ್ಯ ಮೂಡಿಮಠ್)**

ಸಿವಿಲ್ ನ್ಯಾಯಾಧೀಶರು, ಅಂಕೋಲಾ